# ಅಳಿಲಿಗೆ ಬಾಲ ಹೇಗೆ ಬಂತು?

ವೀಣಾ ಶಂಕರ್, ಬೆಂಗಳೂರು
ಚಿತ್ರ: ಶ್ರೀಕೃಷ್ಣ ಕೆದಿಲಾಯ

ಒಂದಾನೊಂದು ಕಾಲದಲ್ಲಿ ಅಳಿಲುಗಳದ್ದೆ ಒಂದು ಸಾಮ್ರಾಜ್ಯ ಇತ್ತು. ಪ್ರಪಂಚದಲ್ಲಿರುವ ಅಳಿಲುಗಳೆಲ್ಲ ಅಲ್ಲೇ ವಾಸವಾಗಿದ್ದವು. ಆ ರಾಜ್ಯದಲ್ಲಿ ಎಲ್ಲವೂ ಸಂತೋಷದಿಂದ ಇದ್ದವು. ಅವುಗಳಿಗೆ ಏನೂ ತೊಂದರೆ ಎನ್ನುವುದು ಇರಲಿಲ್ಲ. ಆದರೆ, ಅವುಗಳಿಗೆ ಸೊಳ್ಳೆಯ ಕಾಟ ಮಾತ್ರ ಬಹಳವಾಗಿ ಕಾಡುತ್ತಿತ್ತು. ಏಕೆಂದರೆ ಆ ರಾಜ್ಯದಲ್ಲಿ ತುಂಬಾ ಸೊಳ್ಳೆಗಳು ಇದ್ದವು. ಬೇರೆ ಪ್ರಾಣಿಗಳಿಗೆ ಬಾಲ ಇದ್ದುದರಿಂದ ಅವುಗಳೆಲ್ಲ ತಮ್ಮ ಬಾಲದಿಂದ ಸೊಳ್ಳೆಗಳನ್ನು ಹೊಡೆದೋಡಿಸುತ್ತಿದ್ದವು. ಆದರೆ ಬಾಲ ಇಲ್ಲದ ಅಳಿಲುಗಳು ಸೊಳ್ಳೆಯಿಂದ ತೊಂದರೆ ಅನುಭವಿಸುತ್ತಿದ್ದವು. ಕಚ್ಚುವ ಸೊಳ್ಳೆಗಳನ್ನು ಓಡಿಸಲಾಗದೆ ಅಸಹಾಯಕತೆಯಿಂದ ಒದ್ದಾಡುತ್ತಿದ್ದವು.

ಒಂದು ದಿನ ಒಂದು ಪುಟ್ಟ ಅಳಿಲು ಆಟವಾಡುತ್ತಿತ್ತು. ಆಗ ಅದಕ್ಕೆ ಒಂದು ದೊಡ್ಡದಾದ ಹಕ್ಕಿಯ ಪುಕ್ಕ ಸಿಕ್ಕಿತು. ಅದು ಅದನ್ನು ಹಿಡಿದುಕೊಂಡು ಆಟವಾಡುತ್ತಿತು. ಆಗ ಸೊಳ್ಳೆಗಳು ಹತ್ತಿರ ಸುಳಿದ ತಕ್ಷಣ ಆ ಪುಕ್ಕದಿಂದ ಅವುಗಳನ್ನು ಓಡಿಸಿತು. 'ಅಬ್ಬಾ! ಎಷ್ಟು ಒಳ್ಳೆಯ ಉಪಾಯ. ನಮಗೂ ಅಷ್ಟೇ ಒಂದು ದೊಡ್ಡದಾದ ಬಾಲ ಇದ್ದಿದ್ದರೆ, ಈ ಸೊಳ್ಳೆಯಿಂದ ಮುಕ್ತಿ ಪಡೆಯಬಹುದು' ಎಂದು ಯೋಚಿಸಿ ಓಡಿ ಬಂದು ಅಳಿಲಿನ ರಾಜನಿಗೆ ತಿಳಿಸಿತು. ತಕ್ಷಣ ರಾಜನು ತನ್ನ ಪರಿವಾರವನ್ನೆಲ್ಲ ಕರೆದು 'ನಾವೆಲ್ಲರೂ ಸೇರಿ ಹನುಮಂತನನ್ನು ಪ್ರಾರ್ಥಿಸೋಣ ಅವನ ದಯೆಯಿಂದ ನಾವು ಬಾಲವನ್ನು ಪಡೆದುಕೊಳ್ಳೋಣ' ಎಂದು ತಿಳಿಸಿದ.

ರಾಜನ ಸೂಚನೆಯಂತೆ ಎಲ್ಲ ಅಳಿಲುಗಳು ಸಮುದ್ರದಲ್ಲಿ ಸ್ನಾನ ಮಾಡಿ ಹನುಮನ ಪ್ರಾರ್ಥನೆ ಮಾಡಿದವು. ತಕ್ಷಣ ಪ್ರತ್ಯಕ್ಷನಾದ ಹನುಮ ಅಳಿಲುಗಳ ಕಷ್ಟವನ್ನು ಕೇಳಿ ತಿಳಿದು 'ನಿಮಗೆಲ್ಲರಿಗೂ ಒಂದು ಸುಂದರ ಬಾಲವನ್ನು ದಯಪಾಲಿಸಿದ್ದೇನೆ, ತಥಾಸ್ತು' ಎಂದು ಅದೃಶ್ಯನಾದನು. ತಕ್ಷಣ ಅಳಿಲುಗಳಿಗೆ ಸುಂದರ ಬಾಲಮೂಡಿತು. ಎಲ್ಲವೂ ಸಂತೋಷದಿಂದ ಸುಖವಾಗಿದ್ದವು.

ಒಂದು ದಿನ ಅಳಿಲುಗಳ ರಾಜ 'ಪ್ರಜೆಗಳೇ, ನಮಗೆ ಇಂತಹ ಸುಂದರ ಬಾಲವನ್ನು ದಯಪಾಲಿಸಿದ ಹನುಮಂತನನ್ನು ಸದಾ ಕಾಲ ಪ್ರಾರ್ಥಿಸೋಣ. ನಾವು ಯಾವಾಗಲಾದರೂ ಸಮಯ ಸಿಕ್ಕಾಗ ಹನುಮನಿಗೆ ಸಹಾಯ ಮಾಡೋಣ' ಎಂದು ಹೇಳಿತು.

ಹಾಗೆಯೇ ಲಂಕೆಗೆ ಸೇತುವೆ ಕಟ್ಟುವ ಸಮಯದಲ್ಲಿ ಎಲ್ಲಾ ಅಳಿಲುಗಳು ತಮ್ಮ ಬಾಲವನ್ನು ನೀರಿನಲ್ಲಿ ಅದ್ದಿ ತೆಗೆದು ಮರಳಿನಲ್ಲಿ ಹೊರಳಾಡಿ ಮೈಗೆ ಅಂಟಿದ್ದ ಮರಳನ್ನು ಉದುರಿಸಿ ಮರಳು ಗುಡ್ಡೆಯನ್ನು ಮಾಡಿ ಸೇತುವೆ ಕಟ್ಟಲು ಸಹಾಯ ಮಾಡಿದವು.

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎನ್ನುವ ಮಾತಿದೆ. 'ಅಳಿಲ ಭಕ್ತಿ, ಮಳಲ ಸೇವೆ' ಎನ್ನುವ ಮಾತು ಅಜರಾಮರವಾಗಿ ಉಳಿದಿದೆ. ದೇವರನ್ನು ಪ್ರಾರ್ಥಿಸೋಣ. ದೇವರು ನಮಗೆ ಸಹಾಯ ಮಾಡುತ್ತಾನೆ. ನಾವು, ನಮ್ಮ ಕೈಲಾದಷ್ಟು ಸಹಾಯ ಇನ್ನೊಬ್ಬರಿಗೆ ಮಾಡೋಣ ಎನ್ನುವ ಉದಾರ ಮನೋಭಾವ 'ಅಳಿಲ ಭಕ್ತಿ' ಎಂದೇ ಹೆಸರಾಗಿ ಉಳಿದಿದೆಯಂತೆ.

